*O.S. 126/2022*
*P.W.1*

(ಸಾಕ್ಷಿಯನ್ನು ದಿನಾಂಕ: 23.07.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ವೈ.ಆರ್.ಹೆಚ್., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ದಿನಾಂಕಃ 23.11.2020 ರಂದು ಪ್ರತಿವಾದಿಯರು ನನಗೆ ಬರೆದುಕೊಟ್ಟಿರುವ ನೋಂದಣಿ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ದಾಖಲೆಯನ್ನು ನಿ.ಪಿ.1 ಎಂದು ಗುರುತಿಸಲಾಯಿತು., ಸದರಿ ದಾಖಲೆಗೆ ನಾನು ಮತ್ತು ಪ್ರತಿವಾದಿಯರು ಎಲ್ಲಾ ಪುಟಗಳಿಗೂ ಸಹಿ ಮಾಡಿದ್ದು, ಕಡೆಯ ಪುಟದಲ್ಲಿರುವ ನನ್ನ ಮತ್ತು ಪ್ರತಿವಾದಿಯರ ಸಹಿಗಳನ್ನು ಈಗ ನೋಡುತ್ತಿದ್ದು ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.1(ಎ) ರಿಂದ ನಿಪಿ-1(ಇ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗೆ ದೇವರ್ದನ್ ಮತ್ತು ಗೋಪಾಲ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಅನುಕ್ರಮವಾಗಿ ನಿ.ಪಿ.1(ಎಫ್ ) ಮತ್ತು 1(ಜಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಶ್ರೀನಿವಾಸಮೂರ್ತಿ ಎಂಬುವವರು ತಯಾರಿಸಿರುತ್ತಾರೆ. ಸದರಿಯವರ ಸಹಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿ.ಪಿ.1(ಹೆಚ್) ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿನ ಪಹಣಿಪತ್ರಿಕೆಯನ್ನು ನಿಪಿ-2 ಎಂದು, ಹಕ್ಕುಬದಲಾವಣೆ ವಹಿಯನ್ನು ನಿಪಿ-3 ಎಂದು, ನಾನು ಪ್ರತಿವಾದಿಯರಿಗೆ ದಿನಾಂಕಃ 11.03.2022 ರಂದು ಕಳುಹಿಸಿದ ತಿಳುವಳಿಕೆಪತ್ರದ ಕಛೇರಿ ಪ್ರತಿಯನ್ನು ನಿ.ಪಿ.4 ಎಂದು ಗುರುತಿಸಲಾಯಿತು. ನಿಪಿ-4 ರಂತೆ ನೀಡಿದ ತಿಳುವಳಿಕೆಪತ್ರ ' ಈ ವಿಳಾಸದವರು ಊರಿನಲ್ಲಿ ಸಿಗದ ಕಾರಣ ವಾಪಸ್ಸು ' ಎಂಬ ಷರಾದೊಂದಿಗೆ ವಾಪಸ್ಸು ಬಂದಿದ್ದು , ವಾಪಸ್ಸು ಬಂದ ಸದರಿ ಅಂಚೆ ಲಕೋಟೆಗಳನ್ನು ಅನುಕ್ರಮವಾಗಿ ನಿಪಿ-5 ರಿಂದ ನಿಪಿ-8 ಎಂದು ಗುರುತಿಸಲಾಯಿತು. ನಿಪಿ-5 ರಿಂದ 8 ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಗಿ ಅದರಲ್ಲಿರುವ ತಿಳುವಳಿಕೆ ಪತ್ರಗಳನ್ನು ಅನುಕ್ರಮವಾಗಿ ನಿಪಿ-5(ಎ) ರಿಂದ ನಿಪಿ-8 (ಎ) ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ ವಾದಿಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯವಕಾಶವನ್ನು ಕೋರಿದ್ದು ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.